ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ. ಬೆಂಗಳೂರು

**************************************************************************

ಸಂಖ್ಯೆ : ಗಣಕಶಾಖೆ/ಎಸ್.ಎಸ್.ಎಲ್.ಸಿ./ಶುಲ್ಕ ಪಾವತಿ/01/2019-20 ದಿನಾಂಕ: 11-11-2019

– ಸುತ್ತೋಲೆ –

ವಿಷಯ: ಏಪ್ರಿಲ್–2020ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನೋಂದಣಿಯಾಗಿರುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ

ಉಲ್ಲೇಖ: 1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಪತ್ರ ಸಂ.KSEEB/ COMP/ SATSDATA/01/2019-20 ದಿನಾಂಕ : 16-09-2019

2) ಈ ಕಛೇರಿಯ ಅಧಿಸೂಚನೆ ಸಂ. ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್–2020/24/ 2019-20 ದಿನಾಂಕ : 30-08-2019

3) ಈ ಕಛೇರಿಯ ಅಧಿಸೂಚನೆ ಸಂ. ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್–2020/24/ 2019-20 ದಿನಾಂಕ : 23-09-2019

4) ಈ ಕಛೇರಿಯ ಅಧಿಸೂಚನೆ ಸಂ. ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್–2020/24/ 2019-20 ದಿನಾಂಕ : 16-10-2019

*******

ಮುಖ್ಯಶಿಕ್ಷಕರಿಗೆ ಮಂಡಳಿಯ ವತಿಯಿಂದ ಈಗಾಗಲೇ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಎಸ್.ಎಸ್.ಎಲ್.ಸಿ. ಏಪ್ರಿಲ್–2020ರ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳ ನೋಂದಣಿ ಮಾಹಿತಿಗಳನ್ನು ಮಂಡಳಿಯ ಜಾಲತಾಣದ (**http://www.kseeb.kar.nic.in**) ಶಾಲಾ ಲಾಗಿನ್‌ನಲ್ಲಿ ಪಡೆಯಲು ಯೋಜಿಸಲಾಗಿತ್ತು. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಯ (ಶಾಲಾ ಅಭ್ಯರ್ಥಿ, ಖಾಸಗಿ ಅಭ್ಯರ್ಥಿ, ಪುನರಾವರ್ತಿತ ಶಾಲಾ ಹಾಗೂ ಖಾಸಗಿ ಅಭ್ಯರ್ಥಿಗಳು) ಏಪ್ರಿಲ್–2020ರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಲು ದಿನಾಂಕ 11-11-2019ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಈಗ ನೋಂದಣಿಯಾದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕಾಗಿದೆ.

1) ಏಪ್ರಿಲ್–2020ರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸುವ ಚಲನ್ **ಮಂಡಳಿಯ ಶಾಲಾ ಲಾಗಿನ್‌ನಲ್ಲಿಯೇ** ದಿನಾಂಕ 12–11–2019ರಿಂದ ಜನರೇಟ್ ಆಗುತ್ತದೆ.
2) ಮುಖ್ಯ ಶಿಕ್ಷಕರು ಚಲನ್‌ನನ್ನು ಡೌನ್‌ಲೋಡ್ ಮಾಡಿಕೊಂಡ ಮೇಲೆ ತಮ್ಮ ಶಾಲೆಯ ವತಿಯಿಂದ ಏಪ್ರಿಲ್–**2020**ರ ಪರೀಕ್ಷೆಗೆ ನೋಂದಣಿಯಾಗಿರುವ ಶಾಲಾ ವಿದ್ಯಾರ್ಥಿಗಳ (CCERF), ಖಾಸಗಿ ವಿದ್ಯಾರ್ಥಿಗಳ(CCEPF), **2003** ರಿಂದ **2019** ರವರೆಗಿನ ಪುನರಾವರ್ತಿತ ಶಾಲಾ ಅಭ್ಯರ್ಥಿಗಳ ಹಾಗೂ ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು (CCERR /CCEPR), **2003** ರಿಂದ **2010** ರವರೆಗಿನ NSR ಮತ್ತು NSPR ಪುನರಾವರ್ತಿತ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಚಲನ್ ಜನರೇಟ್ ಆಗಿದೆಯೇ ಎಂದು ಪರಿಶೀಲಿಸಿಕೊಳ್ಳತಕ್ಕದ್ದು.
3) ಏಪ್ರಿಲ್–2020ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೋಂದಣಿಯಾಗಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಮಂಡಳಿಯ ಜಾಲತಾಣದಲ್ಲಿ ವಿದ್ಯಾರ್ಥಿಗಳ ಮಾಹಿತಿ ನೋಂದಣಿ ಮಾಡುವ ಮತ್ತು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ವೆಚ್ಚ ಪ್ರತಿ ವಿದ್ಯಾರ್ಥಿಗೆ **ರೂ.25/–ರಂತೆ** ಲೆಕ್ಕ ಹಾಕಲಾಗುತ್ತದೆ.
4) **ಮಂಡಳಿಗೆ ಪಾವತಿಸಬೇಕಾದ ಪರೀಕ್ಷಾ ಶುಲ್ಕದ ಬಾಬ್ತು** = ಶಾಲೆಯಲ್ಲಿ ಪರೀಕ್ಷೆಗೆ ನೋಂದಣಿಯಾಗಿರುವ ಎಲ್ಲಾ ರೀತಿಯ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಮೊತ್ತ – ಮಂಡಳಿಯ ಜಾಲತಾಣದಲ್ಲಿ ವಿದ್ಯಾರ್ಥಿಗಳ ಮಾಹಿತಿ ನೋಂದಣಿ ಮಾಡುವ ಮತ್ತು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ವೆಚ್ಚ + ರೂ.5/– ಬ್ಯಾಂಕ್ ಸೇವಾ ಶುಲ್ಕ

5) ಮಂಡಳಿಯ ಶಾಲಾ ಲಾಗಿನ್‌ನಲ್ಲಿ ನೀಡಲಾಗುವ **Challan Generate** ಬಟನ್ ಮೇಲೆ ಕ್ಲಿಕ್ ಮಾಡಿದಾಗ, ತಮ್ಮ ಶಾಲೆಯುಲ್ಲಿ ಪರೀಕ್ಷಾ ನೋಂದಣಿಗೆ ಸಂಬಂಧಿಸಿದಂತೆ ಯಾವುದಾದರೂ **Errors** ಇದ್ದಲ್ಲಿ ಆ **Errors List** display ಆಗುತ್ತದೆ. ಮುಖ್ಯಶಿಕ್ಷಕರು ಆ **Errors**ನ್ನು ಸರಿಪಡಿಸಿದ ನಂತರವೇ **Challan Generate** ಆಗುತ್ತದೆ.
ಉದಾ: **Error type 1: Photo and Signature not uploaded**

**Error type 2: RD Number not entered for students who have claimed Fee Exemption**

ಮಂಡಳಿಯ ಶಾಲಾ ಲಾಗಿನ್‌ನಲ್ಲಿ ಈ **Errors List** ದಿನಾಂಕ: 04-10-2019 ರಿಂದ display ಆಗುತ್ತಿದ್ದರೂ ಸಹ ಈ ದಿನಾಂಕದವರೆಗೆ Photo and Signature not uploaded **65 Errors,** RD Number not entered for students who have claimed Fee Exemption **2193 Errors** ಇದ್ದು ಅವುಗಳನ್ನು ಸರಿಪಡಿಸಲು ಮುಖ್ಯಶಿಕ್ಷಕರು ಕೂಡಲೇ ಕ್ರಮವಹಿಸುವುದು.

6) ಖಾಸಗಿ ಅಭ್ಯರ್ಥಿಯಾಗಿ ನೋಂದಣಿಗೆ ಕೆಲವು ಅಭ್ಯರ್ಥಿಗಳು ಈಗಾಗಲೇ ರೂ.185/-ಗಳ ಶುಲ್ಕವನ್ನು ಬ್ಯಾಂಕಿಗೆ ನೆಫ್ಟ್ ಚಲನ್ ಮುಖಾಂತರ ಪಾವತಿಸಿ ನೋಂದಾಯಿಸಿಕೊಂಡಿರುವ ಪ್ರಕರಣಗಳು ತಿಳಿದು ಬಂದಿರುತ್ತದೆ. ಈ ರೀತಿ ಖಾಸಗಿ ಅಭ್ಯರ್ಥಿಗಳ ನೋಂದಣಿಗೆ ರೂ.185/-ಗಳ ಚಲನ್ ಮುಖಾಂತರ ಪಾವತಿಸಿದ್ದಲ್ಲಿ ಅಂತಹ ಶಾಲೆಯವರು ಮಂಡಳಿಯಿಂದ ಡೌನ್‌ಲೋಡ್ ಮಾಡಿಕೊಂಡ ಚಲನ್‌ನಲ್ಲಿ ಈಗಾಗಲೇ ಪಾವತಿಸಿರುವ ಮೊತ್ತವನ್ನು ಕಳೆದು ಉಳಿದ ಮೊತ್ತಕ್ಕೆ ನೆಫ್ಟ್ ಚಲನ್‌ನಲ್ಲಿ ವಿವರವಾಗಿ ಭರ್ತಿ ಮಾಡಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು. ಎರಡೂ ಚಲನ್ ಗಳ ಮುಖಾಂತರ ಪಾವತಿಸಿದ ಶುಲ್ಕದ ಮೊತ್ತವು ಮಂಡಳಿಯಿಂದ ಡೌನ್‌ಲೋಡ್ ಮಾಡಿಕೊಂಡ ಚಲನ್‌ನಲ್ಲಿ ಬಂದಿರುವ ಮೊತ್ತಕ್ಕೆ ಸರಿಹೊಂದುತ್ತದೆ ಎಂಬುದನ್ನು ಮುಖ್ಯಶಿಕ್ಷಕರು ಖಾತ್ರಿಪಡಿಸಿಕೊಂಡು ಸೂಕ್ತ ದೃಢೀಕರಣದೊಂದಿಗೆ ಮಂಡಳಿಗೆ ರವಾನಿಸುವುದು.

7) ಪರೀಕ್ಷಾ ಶುಲ್ಕ ಪಾವತಿಸುವ ಚಲನ್ ದ್ವಿಪ್ರತಿಯಲ್ಲಿ (Bank copy & School copy) ಜನರೇಟ್ ಆಗುತ್ತದೆ. ಅದನ್ನು ಬಳಸಿ ಬ್ಯಾಂಕಿನಲ್ಲಿ ಪಾವತಿಸಬೇಕು. ಅದರಲ್ಲಿನ Bank copy ಯನ್ನು ಬ್ಯಾಂಕಿನಲ್ಲಿಯೇ ಉಳಿಸಿಕೊಳ್ಳುತ್ತಾರೆ. School copy ಯನ್ನು ತಮಗೆ ಹಿಂದಿರುಗಿಸಲಾಗುತ್ತದೆ.

8) ನೆಫ್ಟ್ ಚಲನ್/ಮಂಡಳಿಯಿಂದ ಜನರೇಟ್ ಆಗಿರುವ ಚಲನ್ ಮೂಲಕ ಪಾವತಿಸಿರುವ ಮೂಲ ಚಲನ್ ಪ್ರತಿಯನ್ನು ಮಂಡಳಿಗೆ ಕಡ್ಡಾಯವಾಗಿ ಸಲ್ಲಿಸುವುದು.

9) ಚಲನ್ ಡೌನ್‌ಲೋಡ್ ಮಾಡಿಕೊಳ್ಳಲು ಅಂತಿಮ ದಿನಾಂಕ : 21-11-2019

10) ಬ್ಯಾಂಕಿಗೆ ಶುಲ್ಕ ಪಾವತಿಸಲು ಅಂತಿಮ ದಿನಾಂಕ : 22-11-2019

11) ಶುಲ್ಕ ಪಾವತಿಸಿದ ಚಲನ್‌ನ್ನು ಮಂಡಳಿಗೆ ತಲುಪುವಂತೆ ರವಾನಿಸಲು ಕೊನೆಯ ದಿನಾಂಕ: 30-11-2019

(ಸುಮಂಗಲ. ವಿ) 11/11
ನಿರ್ದೇಶಕರು, (ಪರೀಕ್ಷೆಗಳು)

**ಅಗತ್ಯ ಕ್ರಮಕ್ಕಾಗಿ :**

ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ

1) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
2) ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ

**ಪ್ರತಿಗಳನ್ನು :**

1) ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
4) ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5) ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ
6) ನಿರ್ದೇಶಕರು, ಪ್ರೌಢ ಶಿಕ್ಷಣ, ಮಾನ್ಯ ಆಯುಕ್ತರ ಕಛೇರಿ
7) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ ಹಾಗೂ ಕಲಬುರ್ಗಿ ವಿಭಾಗಗಳು

ಇವರುಗಳಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.